# ಇದು ಪರಿವರ್ತನೆಯ ಕಾಲ!

★ ಮಾತುಕತೆ: ಬಿ.ಎಂ.ಹನೀಫ್

**★ ಇತ್ತೀಚೆಗೆ ಕನ್ನಡ ಸಿನಿಮಾಗಳೆಲ್ಲ ಮಕಾಡೆ ಮಲಗುತ್ತಿವೆ, ಟಿವಿ ರಿಯಾಲಿಟಿ ಷೋಗಳ ಹವಾ ಜೋರಾಗಿದೆ. ಸಿನಿಮಾ ನೋಡಲು ಬರದ ಜನ, ರಿಯಾಲಿಟಿ ಷೋಗಳನ್ನು ಸಂಭ್ರಮದಿಂದ ಎದುರು ನೋಡುತ್ತಾರೆ. ಏನಿದರ ಮರ್ಮ?**

**ರಮೇಶ್ ಅರವಿಂದ್:** ಇದು ಟ್ರಾನ್ಸಿಸನ್ ಪೀರಿಯಡ್ ಸಾರ್. ಒಂದು ಹಂತದಿಂದ ಇನ್ನೊಂದು ಹಂತಕ್ಕೆ ನಮ್ಮ ಮನರಂಜನೆ ಉದ್ಯಮ ಚಲಿಸುತ್ತಿದೆ. ಸಿನಿಮಾ ಎನ್ನುವ ಮನರಂಜನೆಯ ಹಂತ ಇನ್ನೂ ಪೂರ್ತಿಯಾಗಿ ಕಳಚಿಕೊಂಡಿಲ್ಲ; ಟಿವಿ ರಿಯಾಲಿಟಿ ಷೋಗಳ ಹಂತ ಇನ್ನೂ ಪೂರ್ತಿಯಾಗಿ ಕಚ್ಚಿಕೊಂಡಿಲ್ಲ; ನಾವು ಒಂಥರಾ ಮಧ್ಯೆ ಇದ್ದೇವೆ. ಇಲ್ಲೊಂದು ಪ್ರಾಬ್ಲಂ ಇದೆ–– ಮೊದಲು ಡೈರೆಕ್ಟರ್ ಒಬ್ಬನಿಗೆ ಮಾತ್ರ ಕಥೆ ಹೇಳಲು ಗೊತ್ತಿತ್ತು. ಈಗ ಎಲ್ಲರೂ ಡೈರೆಕ್ಟರ್ ಆಗಿದ್ದಾರೆ. ಕೈಗೆ ಮೊಬೈಲ್ ಬಂದ ಬಳಿಕ ಎಲ್ಲರಿಗೂ ಸಿನಿಮಾ ಡೈರೆಕ್ಟರ್‌ನ ಮೂಲ ಜ್ಞಾನಗಳೆಲ್ಲ ಗೊತ್ತಾಗಿವೆ. ಕ್ಯಾಮೆರಾ ಚಲನೆ, ಕ್ಲೋಸಪ್, ವೈಡ್ ಆ್ಯಂಗಲ್, ಎಡಿಟಿಂಗ್ ಎಲ್ಲ ವಿಷಯಗಳಲ್ಲೂ ಪ್ರೇಕ್ಷಕ ಸ್ಪೆಶಲೈಸ್ ಆಗಿದ್ದಾನೆ. ಇವೆಲ್ಲ ಸಿನಿಮಾ ಡೈರೆಕ್ಟರ್‌ಗಳಿಗೆ ಮಾತ್ರ ಗೊತ್ತಿದ್ದ ಅಂಶಗಳು. ಈಗ ಮೊಬೈಲ್ ಫೋನ್‌ಗಳಲ್ಲಿ ಎಲ್ಲ ಆ್ಯಪ್‌ಗಳೂ ಬಂದಿವೆ. ನನ್ನ ಮಗಳೇ ಎಷ್ಟು ಚೆನ್ನಾಗಿ ಎಡಿಟ್ ಮಾಡಿ ಹಾಕ್ತಿದ್ದಾಳೆಂದರೆ, ನೀನು ಎಲ್ಲಿ ಕಲ್ತಿದ್ದಮ್ಮಾ ಎಂದು ನಾನು ಕೇಳುತ್ತೇನೆ! ಅವರಿಗೆ ಯಾರೂ ಹೇಳಿಕೊಟ್ಟಿಲ್ಲ. 240 ಟಿವಿ ಚಾನೆಲ್‌ಗಳನ್ನು ದಿನಾಲೂ ನೋಡಿ ನೋಡಿ ಎಲ್ಲರೂ ವಿಷುವಲೀ ಲಿಟರೇಟ್ ಆಗಿಬಿಟ್ಟಿದ್ದಾರೆ. ಇಮೇಜ್‌ಗಳ ಬಗ್ಗೆ ಎಲ್ಲವನ್ನೂ ತಿಳಿದುಕೊಂಡಿದ್ದಾರೆ. ಪ್ರೇಕ್ಷಕ ದಿನಾ ಮೊಬೈಲ್‌ನಲ್ಲಿ ಸಿನಿಮಾ ತೆಗೀತಾ ಇರ್ತಾನೆ. ಹೆಂಡ್ತಿ ನಗೋದನ್ನು ತೆಗೀತಾನೆ, ಮಗು ಆಟ ಆಟೋದನ್ನು ತೆಗೀತಾನೆ. ಮೊದಲು ನಾವು ಸಿನಿಮಾ ಮಾಡುತ್ತಿದ್ದಾಗ ಒಬ್ಬ ಪ್ರೇಕ್ಷಕನಿಗೆ ಒಂದು ಶಾಟ್ ಅರ್ಥ ಆಗಬೇಕಾದರೆ ಕನಿಷ್ಠ ಆರು ಇಮೇಜ್‌ಗಳಾದರೂ ಬೇಕಾಗುತ್ತಿತ್ತು. ಈಗ 2—3 ಫ್ರೇಮ್‌ಗಳ ಒಳಗೆ ಪ್ರೇಕ್ಷಕ ಗ್ರಹಿಸಿಬಿಡ್ತಾನೆ! ಅಷ್ಟು ಅಭ್ಯಾಸ ಆಗ್ಬಿಟ್ಟಿದೆ, ಕಣ್ಣು ಶಾರ್ಪ್ ಆಗಿದೆ, ತಲೆ ಹೆಚ್ಚು ಚುರುಕಾಗಿದೆ. ಹಾಗಾಗಿ ನಮ್ಮ ಸಿನಿಮಾಗಳು ಹಳೇ ಸ್ಟೋರಿ, ಕಥೆ ಹೇಳೋ ಹಳೇ ರೀತಿ ಇವೆಲ್ಲದರಿಂದ ಹೊರಬರಬೇಕಿದೆ.

**★ ರಿಯಾಲಿಟಿ ಷೋಗಳು ಏಕೆ ಇಷ್ಟೊಂದು ಜನಪ್ರಿಯತೆ ಗಳಿಸುತ್ತಿವೆ?**

ರಿಯಾಲಿಟಿ ಷೋಗಳಲ್ಲಿ ಈಗ ನಿಜವಾದ ದೃಶ್ಯಗಳು ಸಿಗುತ್ತವೆ. ನಿನ್ನೆ ನನ್ನ ಕನ್ನಡದ ಕೋಟ್ಯಧಿಪತಿ ಷೋನಲ್ಲಿ ಒಬ್ಬ ಬಂದಿದ್ದ–. ಅವನು ಎಷ್ಟು ರಿಯಲ್ ಆಗಿದ್ದಾನೆ ಅಂದರೆ, ನಾವು ಸಿನಿಮಾಕ್ಕಾಗಿ ಬರೆಯೋ ಕ್ಯಾರೆಕ್ಟರ್ ಸುಳ್ಳು ಕ್ಯಾರೆಕ್ಟರ್ ಅಂತ ಪ್ರೇಕ್ಷಕನಿಗೆ ಅನ್ನಿಸೋಕೆ ಶುರುವಾಗಿದೆ. ಇಷ್ಟು ರಿಯಲ್ ಆದ ಒಬ್ಬ ವ್ಯಕ್ತಿ ಟಿವಿಯಲ್ಲಿ ಕಾಣಿಸಬೇಕಾದರೆ, ಸಿನಿಮಾದಲ್ಲಿ ಕೃತ್ರಿಮ ಸನ್ನಿವೇಶಗಳನ್ನು ನೋಡಲು ಯಾರು ಬಯಸ್ತಾರೆ? ರಿಯಲ್ ಲೈಫ್‌ನಲ್ಲಿ ಅಷ್ಟೊಂದು ಡ್ರಾಮಾಗಳಿವೆ. ಸಿನಿಮಾದಲ್ಲಿ ಕಾಲ್ಪನಿಕ ವಿಷಯಗಳನ್ನು ಬರೀತೇವೆ, ಆದರೆ ಟಿ.ವಿ ಕ್ಯಾರೆಕ್ಟರ್ ಪ್ರೇಕ್ಷಕನಿಗೆ ಅತ್ಯಂತ ಹತ್ತಿರ ಆಗ್ತಾನೆ. ಸಿನಿಮಾ ಕಥೆಗಾರ ಬರೆಯುವ ಲೈನ್‌ಗಳಿಗಿಂತ ಟಿ.ವಿ ಪಾತ್ರದ ಡ್ರಾಮಾ ಹೆಚ್ಚಿದೆ. ಲೈಫ್ ಈಸ್ ಬಿಗ್ಗರ್ ದ್ಯಾನ್ ಫಿಕ್ಷನ್ ಅಂತಾರಲ್ಲ ಹಾಗೆ!

**★ ನೀವೀಗ ಎರಡು ದೋಣಿಯ ಯಶಸ್ವೀ ಪಯಣಿಗ. ರಿಯಾಲಿಟಿ ಷೋ ಅನುಭವ ಹೇಗಿದೆ?**

ಮೊನ್ನೆ ನನಗೆ ಷಾಕ್ ಆಗಿ ಹೋಯ್ತು– ಸಾರ್! ಕೋಟ್ಯಧಿಪತಿ ಷೋನಲ್ಲಿ ಒಬ್ಬಾಕೆ ಬಂದಿದ್ರು, ಫಾಸ್ಟೆಸ್ಟ್ ಫಿಂಗರ್ ಸ್ಪರ್ಧೆಯಲ್ಲಿ ಆಕೆ ಗೆದ್ದಿದ್ದಾರೆ. ನಾನು ಅದನ್ನು ಬೆರಳುಗಳ ಮಿಂಚಿನ ಓಟ ಎಂದು ಕರೀತೇನೆ. ಆಶ್ಚರ್ಯ ಅಂದರೆ ಆಕೆಗೆ ಬೆರಳುಗಳೇ ಇಲ್ಲ ಸಾರ್! ಬೆರಳುಗಳು ಕತ್ತರಿಸಿ ಹೋಗಿವೆ. ಅಲ್ಲಿ ಆ ಹತ್ತು ಜನದಲ್ಲಿ ಅವಳೊಬ್ಬಳೇ ಆ ಪ್ರಶ್ನೆಗೆ ಉತ್ತರ ಕೊಟ್ಟಿದ್ದು– –ಅದೂ ಅತ್ಯಂತ ವೇಗವಾಗಿ. ಬೆರಳುಗಳೇ ಇಲ್ಲದ ಒಬ್ಬಾಕೆ ಹೀಗೆ ಫಾಸ್ಟೆಸ್ಟ್ ಫಿಂಗರ್ ಫಸ್ಟ್ ಆಗುತ್ತಾಳೆಂದರೆ ಇಲ್ಲಿ ಎಷ್ಟು ಡ್ರಾಮಾ ಇದೆ ನೋಡಿ! ಈ ತರಹದ

